ಗ್ರಾಮೀಣ ನೀರು ಸರಬರಾಜು ಯೋಜನೆ

೫೦೩೬. ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಪುರ ತಾಲ್ಲೂಕಿನ ಗ್ರಾಮಗಳಿಗೆ ನಲ್ಲಿ ನೀರು ಒದಗಿಸುವ ಕಾರ್ಯ ಪ್ರಾರಂಭವಾಗಿದ್ದು ಚರಂಡಿ ವ್ಯವಸ್ಥೆ ಸರಿಯಿಲ್ಲದೆ ನೀರು ನಿಂತು ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದಲ್ಲಿ ಸರ್ಕಾರದವರು ಮಂಡಲ ಪಂಚಾಯತಿಗಳಿಗೆ ಕ್ರಮ ತೆಗೆದುಕೊಳ್ಳುವಂತೆ ಆದೇಶಿಸುವರೆ ?

ಇ) ಸಾಗರ ಮತ್ತು ಗೋಗೆ ಗ್ರಾಮಗಳಿಗೂ ಒಳಚರಂಡಿ ವ್ಯವಸ್ಥೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ ಮಂತ್ರಿಗಳು).—

ಅ) ಇಲ್ಲ.

ಆ) ನಳದ ನೀರು ಸರಬರಾಜು ಯೋಜನೆಗಳಿರುವ ಗ್ರಾಮಗಳಲ್ಲಿ ಚೆಲ್ಲಿ ಹೋದ ನೀರು ಹರಿದು ಹೋಗಲು ಮಾತ್ರ ೫ ಮೀಟರ್ ಚರಂಡಿ ವ್ಯವಸ್ಥೆ ಮಾಡಲಾಗುತ್ತಿದೆ. ಉಳಿದ ಚರಂಡಿ ವ್ಯವಸ್ಥೆ ಮಂಡಲ ಪಂಚಾಯ್ತಿ ಪರಿಮಿತಿಯಲ್ಲಿದೆ.

ಇ) ಸಂಬಂಧಪಟ್ಟ ಮಂಡಲ ಪಂಚಾಯ್ತಿಗಳಿಗೆ ಸೂಚನೆಯನ್ನು ನೀಡಲಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹೆಚ್.ಐ.ಜಿ. ಮನೆಗಳ ಬಗ್ಗೆ

೫೦೩೭. ಶ್ರೀ ಕೆ. ವಸಂತ ಬಂಗೇರ.—(ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ ರಿಂದ ೧೯೮೭-೮೮ ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬೆಂಗಳೂರು ನಗರದ ಬೇರೆ ಬೇರೆ ಬಡಾವಣೆಗಳಲ್ಲಿ ಹೆಚ್.ಐ.ಜಿ., ಎಂ.ಐ.ಜಿ. ಮತ್ತು ಎಲ್.ಐ.ಜಿ. ಯೋಜನೆಯಲ್ಲಿ ಎಷ್ಟೆಷ್ಟು ಮನೆಗಳನ್ನು ಕಟ್ಟಿಸಿದ್ದಾರೆ.

(ವಿವರ ಒದಗಿಸುವುದು .

ಆ) ಸದರಿ ಮನೆಗಳ ಖರೀದಿ ಮೊತ್ತವೆಷ್ಟು ?

ಇ) ಆ ಪೈಕಿ ಖರೀದಿಸಿ ಖಾಲಿಯಿರುವ ಮತ್ತು ವಿತರಣೆಯಾಗದೇ ಇರುವ ಮನೆಗಳ ಸಂಖ್ಯೆ ಎಷ್ಟು ? (ವಿವರ ಒದಗಿಸುವುದು).

ಈ) ಸದರಿ ಪ್ರಾಧಿಕಾರದವರು ಇತರೆ ಬಡಾವಣೆಗಳಲ್ಲಿ ನಿರ್ಮಿಸಿರುವ ಪ್ಲಾಟ್‌ಗಳೆಷ್ಟು? ಹಾಗೂ ಅವುಗಳ ಖರೀದಿ ಮೊತ್ತವೆಷ್ಟು ?

(ಪ್ರತ್ಯೇಕ ವಿವರ ನೀಡುವುದು).

ಉ) ಆ ಪೈಕಿ ಖಾಲಿ ಇರುವ ಮನೆಗಳೆಷ್ಟು ? ಸದರಿ ಖಾಲಿ ಮನೆಗಳನ್ನು ವಿತರಣೆ ಮಾಡಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ ?